# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 552(779) |
| ಸದಸ್ಯರ ಹೆಸರು | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.08.2025 |
| ಉತ್ತರಿಸುವವರು | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಮಂದಿ ಮಾವುತರು, ಕಾವಾಡಿಗರು ಹಾಗೂ ಜಮಾದಾರರು ಸೇವೆಯಲ್ಲಿದ್ದಾರೆ (ಜಿಲ್ಲಾವಾರು ಮಾಹಿತಿ ನೀಡುವುದು) | ಅರಣ್ಯ ಇಲಾಖೆಯಲ್ಲಿ ಮಂಜೂರಾದ, ಭರ್ತಿಯಾದ (ಸೇವೆಯಲ್ಲಿರುವ) ಹಾಗೂ ಖಾಲಿಯಿರುವ ಆನೆ ಜಮೇದಾರ, ಆನೆ ಮಾವುತ, ಆನೆ ಕಾವಾಡಿಗ ಹುದ್ದೆಗಳ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.<br>• ಆನೆ ಜಮೇದಾರ ವೃಂದದಲ್ಲಿನ ಹುದ್ದೆಗಳನ್ನು ಸಂಪೂರ್ಣವಾಗಿ ಆನೆ ಮಾವುತ ವೃಂದದಲ್ಲಿನ ಅರ್ಹ ನೌಕರರುಗಳಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ. ಪ್ರಸ್ತುತ ಯಾವುದೇ ಹುದ್ದೆಯು ಖಾಲಿ ಇರುವುದಿಲ್ಲ.<br>• ಆನೆ ಮಾವುತ ವೃಂದದಲ್ಲಿನ ಹುದ್ದೆಗಳನ್ನು ಸಂಪೂರ್ಣವಾಗಿ ಆನೆ ಕಾವಾಡಿಗ ವೃಂದದಲ್ಲಿನ ಅರ್ಹ ನೌಕರರುಗಳಿಗೆ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಆನೆ ಕಾವಾಡಿಗ ವೃಂದದಲ್ಲಿ ಅರ್ಹ ನೌಕರರು ಲಭ್ಯವಾದ ನಂತರ ಕಾಲಕಾಲಕ್ಕೆ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತಿದೆ.<br>• ಆನೆ ಕಾವಾಡಿಗ ವೃಂದದಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |
| ಆ) | ಈ ವಿಭಾಗದಲ್ಲಿ ಒಟ್ಟು ರಾಜ್ಯದಲ್ಲಿ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಮುಂದಿನ ದಿನಗಳಲ್ಲಿ ಮಾವುತರು, ಕಾವಾಡಿಗರು ಮತ್ತು ಜಮಾದಾರರ ನೇಮಕಾತಿಗೆ ಸರ್ಕಾರದಿಂದ ಹೊಸದಾಗಿ ಪ್ರಕ್ರಿಯೆ ಕೈಗೊಳ್ಳಲಾಗುವುದೆ; (ಕೈಗೊಂಡಿದ್ದಲ್ಲಿ ವಿವರ ಒದಗಿಸುವುದು) | |
| ಇ) | ಇವರುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ನೀಡಲಾಗುತ್ತಿದೆಯೇ; ನೀಡಲಾಗುತ್ತಿಲ್ಲವೆಂದರೆ ಕಾರಣಗಳೇನು; | ಅರಣ್ಯ ಇಲಾಖೆಯಲ್ಲಿ ಆನೆ ಜಮೇದಾರ, ಆನೆ ಮಾವುತ ಮತ್ತು ಆನೆ ಕಾವಾಡಿಗ ವೃಂದಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ನೀಡಲಾಗುತ್ತಿದೆ. |
| ಈ) | ಹೊಸ ಜಿಲ್ಲೆ, ತಾಲ್ಲೂಕು, ಪಾಲಿಕೆ, ವ್ಯಾಪ್ತಿಗಳಲ್ಲಿ ಮಾವುತರಿಗೆ | ಅರಣ್ಯ ಇಲಾಖೆಯಲ್ಲಿ ಸಾಕಾನೆಗಳ ಸಂಖ್ಯೆಯು ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿದ್ದು, ಆನೆಗಳಿಗೆ |

| | | |
|---|---|---|
| | ಶಿಬಿರಗಳ ಸ್ಥಾಪನೆಯು ಸರ್ಕಾರದಿಂದ ಆಗುತ್ತಿದಿಯೇ; (ಜಿಲ್ಲಾವಾರು ತಾಲ್ಲೂಕುವಾರು ವಿವರ ಒದಗಿಸುವುದು) | ಸೂಕ್ತವಾದ ಪ್ರಾಕೃತಿಕ ವಾತಾವರಣ ಹೊಂದಿದ ದೊಡ್ಡ ಅವಾಸ ಸ್ಥಳ, ನೀರಿನ ಸೌಲಭ್ಯ ಹಾಗೂ ದೀರ್ಘಕಾಲದ ಅವಧಿಯಲ್ಲಿ ಸುವ್ಯವಸ್ಥಿತವಾಗಿ ನಡೆಸುವ ಅವಕಾಶವನ್ನು ಪರಿಗಣಿಸಿ ಆನೆ ಶಿಬಿರಗಳನ್ನು ಸ್ಥಾಪಿಸಲಾಗುತ್ತಿದೆ.<br>ಅರಣ್ಯ ಇಲಾಖೆಯಲ್ಲಿ ಪ್ರಸ್ತುತ ನಿರ್ವಹಿಸ ಲಾಗುತ್ತಿರುವ ಆನೆ ಶಿಬಿರಗಳ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ. |
| ಉ) | ಇವರುಗಳ ಮಕ್ಕಳಿಗೆ ಮೂಲಭೂತ ಸೌಕರ್ಯಗಳಾದ ಆರೋಗ್ಯ ಸೇವೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಅರಣ್ಯ ಇಲಾಖೆಯಲ್ಲಿ ಖಾಯಂ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆನೆ ಜಮೆದಾರರು, ಆನೆ ಮಾವುತರು ಮತ್ತು ಆನೆ ಕಾವಾಡಿಗರುಗಳಿಗೆ ಸ್ಥಳೀಯ ಲಭ್ಯತೆಯಂತೆ ವಸತಿ ಗೃಹಗಳು, ಅಲ್ಲದೆ ಸರ್ಕಾರಿ ನೌಕರರಿಗೆ (ಅವರ ಮಕ್ಕಳು/ಅವಲಂಬಿತರನ್ನು ಒಳಗೊಂಡಂತೆ) ನಿಯಮಗಳಲ್ಲಿ ಲಭ್ಯವಿರುವ ಅವಕಾಶಗಳನ್ವಯ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. |

ಸಂಖ್ಯೆ: ಎಫ್‌ಇಇ 237 ಎಫ್‌ಎನ್‌ಜಿ 2025

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

# ಅನುಬಂಧ-1

## ಅರಣ್ಯ ಇಲಾಖೆಯಲ್ಲಿನ ಆನೆ ಜಮೇದಾರ, ಆನೆ ಮಾವುತ ಮತ್ತು ಆನೆ ಕವಾಡಿಗ ವೃಂದಗಳಲ್ಲಿನ ಹುದ್ದೆಗಳ ವಿವರ

**1. ಆನೆ ಜಮೇದಾರ ವೃಂದ (ಗ್ರೂಪ್ 'ಸಿ'):**

| ಕ್ರ. ಸಂ. | ಅರಣ್ಯ ವೃತ್ತ | ಅರಣ್ಯ ವಿಭಾಗ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|---|
| 1 | ಚಾಮರಾಜನಗರ | ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ | 1 | 1 | 0 |
| 2 | ಕೆನರಾ | ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ | 0 | 0 | 0 |
| 3 | ಕೊಡಗು | ಮಡಿಕೇರಿ ವಿಭಾಗ | 2 | 2 | 0 |
| 4 | ಮೈಸೂರು | ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ | 3 | 3 | 0 |
| 5 | ಶಿವಮೊಗ್ಗ | ಶಿವಮೊಗ್ಗ ವನ್ಯಜೀವಿ ವಿಭಾಗ | 2 | 2 | 0 |
| **ಒಟ್ಟು** | | | **8** | **8** | **0** |

**2. ಆನೆ ಮಾವುತ ವೃಂದ (ಗ್ರೂಪ್ 'ಸಿ'):**

| ಕ್ರ. ಸಂ. | ಅರಣ್ಯ ವೃತ್ತ | ಅರಣ್ಯ ವಿಭಾಗ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|---|
| 1 | ಚಾಮರಾಜನಗರ | ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ | 25 | 15 | 10 |
| 2 | ಕೆನರಾ | ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ | 2 | 0 | 2 |
| 3 | ಕೊಡಗು | ಮಡಿಕೇರಿ ವಿಭಾಗ | 30 | 18 | 12 |
| 4 | ಮೈಸೂರು | ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ | 44 | 39 | 5 |
| 5 | ಶಿವಮೊಗ್ಗ | ಶಿವಮೊಗ್ಗ ವನ್ಯಜೀವಿ ವಿಭಾಗ | 21 | 16 | 5 |
| **ಒಟ್ಟು** | | | **122** | **88** | **34** |

**3. ಆನೆ ಕವಾಡಿಗ ವೃಂದ (ಗ್ರೂಪ್ 'ಡಿ'):**

| ಕ್ರ. ಸಂ. | ಅರಣ್ಯ ವೃತ್ತ | ಅರಣ್ಯ ವಿಭಾಗ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿಯಿರುವ ಹುದ್ದೆಗಳು |
|---|---|---|---|---|---|
| 1 | ಚಾಮರಾಜನಗರ | ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ | 25 | 13 | 12 |
| 2 | ಕೆನರಾ | ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ | 2 | 1 | 1 |
| 3 | ಕೊಡಗು | ಮಡಿಕೇರಿ ವಿಭಾಗ | 30 | 18 | 12 |
| 4 | ಮೈಸೂರು | ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ | 44 | 9 | 35 |
| 5 | ಶಿವಮೊಗ್ಗ | ಶಿವಮೊಗ್ಗ ವನ್ಯಜೀವಿ ವಿಭಾಗ | 21 | 6 | 15 |
| **ಒಟ್ಟು** | | | **122** | **47** | **75** |

ಷರಾ: ಅರಣ್ಯ ಇಲಾಖೆಯಲ್ಲಿ ಆಡಳಿತ ಘಟಕಗಳನ್ನು ಅರಣ್ಯ ವೃತ್ತ ಹಾಗೂ ಅರಣ್ಯ ವಿಭಾಗಗಳಾಗಿ ವಿಂಗಡಣೆ ಮಾಡಲಾಗಿದ್ದು, ಸದರಿ ಘಟಕಗಳ ಭೌಗೋಳಿಕ ವ್ಯಾಪ್ತಿಗಳು ಜಿಲ್ಲೆಗಳ ಭೌಗೋಳಿಕ ವ್ಯಾಪ್ತಿಗಳಿಗ ವಿಭಿನ್ನವಾಗಿರುತ್ತದೆ. ಇದರಿಂದಾಗಿ ಅರಣ್ಯ ಇಲಾಖೆಯಲ್ಲಿ ವಿವರಗಳನ್ನು ಜಿಲ್ಲಾವಾರು ಬದಲಾಗಿ ಅರಣ್ಯ ವೃತ್ತವಾರು ಹಾಗೂ ಅರಣ್ಯ ವಿಭಾಗವಾರು ನಿರ್ವಹಿಸಲಾಗುತ್ತಿದ್ದು, ಅದರಂತೆ ಈ ಮೇಲಿನ ತ:ಖ್ತೆಯಲ್ಲಿ ಅಂಕಿ-ಅಂಶಗಳನ್ನು ಅರಣ್ಯ ವೃತ್ತವಾರು ಹಾಗೂ ಅರಣ್ಯ ವಿಭಾಗವಾರು ನಮೂದಿಸಲಾಗಿರುತ್ತದೆ.

12/08/25

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಿಬ್ಬಂದಿ ಮತ್ತು ನೇಮಕಾತಿ)

<u>ಅನುಬಂಧ-2</u>

## ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆನೆ ಶಿಬಿರಗಳ ವಿವರ

| ಕ್ರ. ಸಂ. | ಅರಣ್ಯ ವೃತ್ತ | ಅರಣ್ಯ ವಿಭಾಗ | ವಲಯ | ಆನೆ ಶಿಬಿರದ ಹೆಸರು |
|---|---|---|---|---|
| 1 | ಮೈಸೂರು | ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ | ಆನ ಚೌಕೂರು ವನ್ಯಜೀವಿ ವಲಯ | ಮತ್ತಿಗೋಡು ಆನೆ ಶಿಬಿರ |
| | | | ಹುಣಸೂರು ವನ್ಯಜೀವಿ ವಲಯ | ದೊಡ್ಡಹರಿವೆ ಆನೆ ಶಿಬಿರ |
| | | | | ಭೀಮನಕಟ್ಟೆ ಆನೆ ಶಿಬಿರ |
| | | | ಡಿ.ಬಿ. ಕುಪ್ಪೆ ವನ್ಯಜೀವಿ ವಲಯ | ಬಳ್ಳೆ ಆನೆ ಶಿಬಿರ |
| 2 | ಕೊಡಗು | ಮಡಿಕೇರಿ ವಿಭಾಗ | ಕುಶಾಲನಗರ ವಲಯ | ದುಬಾರೆ ಆನೆ ಶಿಬಿರ |
| | | | | ಹಾರಂಗಿ ಆನೆ ಶಿಬಿರ |
| 3 | ಶಿವಮೊಗ್ಗ | ಶಿವಮೊಗ್ಗ ವನ್ಯಜೀವಿ ವಿಭಾಗ | ಸಕ್ರೆಬೈಲು ವನ್ಯಜೀವಿ ವಲಯ | ಸಕ್ರೆಬೈಲು ಆನೆ ಶಿಬಿರ |
| 4 | ಚಾಮರಾಜನಗರ | ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶ | ಕೆ. ಗುಡಿ ವನ್ಯಜೀವಿ ವಲಯ | ಕೆ.ಗುಡಿ (ಬೂದಿಪಡಗ) ಆನೆ ಶಿಬಿರ |
| | | | ಎ.ಎಮ್. ಗುಡಿ ವನ್ಯಜೀವಿ ವಲಯ | ರಾಂಪುರ ಆನೆ ಶಿಬಿರ |
| 5 | ಕೆನರಾ | ಕಾಳಿ ಹುಲಿ ಸಂರಕ್ಷಿತ ಪ್ರದೇಶ, ದಾಂಡೇಲಿ | ಫಣಸೋಲಿ ವನ್ಯಜೀವಿ ವಲಯ | ಫಣಸೋಲಿ ಆನೆ ಶಿಬಿರ |

12/08/25

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಸಿಬ್ಬಂದಿ ಮತ್ತು ನೇಮಕಾತಿ)